ವಿರೋಧ ಎಂಬಂತಹ ತತ್ವಗಳನ್ನು ಹೇಳುತ್ತಲೇ ಪ್ರಧಾನಿಯವರು ಅಪಾರ ಒತ್ತು ನೀಡಿ ಪದೇ ಪದೇ ಪ್ರಸ್ತಾಪಿಸುವಂತಹ 'ನಾರಿ ಶಕ್ತಿ'ಯನ್ನು ಅಣಕಿಸುವಂತೆ ಈ ಬೆಳವಣಿಗೆ ನಡೆದಿದೆ. ಬ್ರಿಜ್ ಭೂಷಣ್ ಅತಿಕ್ರಮಣಗಳ ವಿರುದ್ಧ ಈ ಮಹಿಳಾ ಕುಸ್ತಿಪಟುಗಳು ಸಮರ ಸಾರಿದ್ದರೂ ಬ್ರಿಜ್ ಭೂಷಣ್‌ರ ರಾಜಕೀಯ ಪ್ರಭಾವವೇನೂ ಕುಂದಿಲ್ಲ ಎಂಬುದು ಪರಿಸ್ಥಿತಿಯ ವ್ಯಂಗ್ಯ.

## ದನಿಗುಂದಿದ ಹೋರಾಟಗಳು

ಹಾಗೆಯೇ, '#ಮೀ ಟೂ' ಹಾಗೂ '# ಟೈಮ್ಸ್ ಅಪ್' ಅಂತಹ ಪ್ರತಿರೋಧದ ಹೋರಾಟಗಳು ಭಾರತದ ನೆಲದಲ್ಲೂ ಸದ್ದು ಮಾಡಿದ್ದವು. ಮೌನದ ಪರಿಧಿಯೊಳಗೆ ಹೂತಿಟ್ಟ ಲೈಂಗಿಕ ಕಿರುಕುಳಗಳ ಕಥಾನಕಗಳನ್ನು ಸಂತ್ರಸ್ತೆಯರು ಅನಾವರಣ ಮಾಡಿದ್ದಾರೆ. ಈ ಬೆಳವಣಿಗೆಗಳ ನಡುವೆಯೂ ರಾಷ್ಟ್ರದಲ್ಲಿ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಅವ್ಯಾಹತವಾಗಿ ಮುಂದುವರಿಯುತ್ತಲೇ ಇವೆ.

ವಿಶ್ವದಲ್ಲಿ #ಮೀ ಟೂ ಆಂದೋಲನ 2017ರಲ್ಲಿ ವ್ಯಾಪಕವಾಗಿ ಪಸರಿಸಿದ ನಂತರ, ಲೈಂಗಿಕ ದೌರ್ಜನ್ಯ, ಅತ್ಯಾಚಾರಕ್ಕಾಗಿ ಹಾಲಿವುಡ್‌ನ ಬಲಿಷ್ಠ ನಿರ್ಮಾಪಕ ಹಾರ್ವೆ ವೈನ್ ಸ್ಟೀನ್‌ಗೆ ಜೈಲು ಶಿಕ್ಷೆಯೂ ಆಯಿತು. ಆದರೆ ಲೈಂಗಿಕ ಹಿಂಸೆ–ಅಪರಾಧಗಳು ಸಾಂಕ್ರಾಮಿಕದಂತೆ ಎಲ್ಲೆಡೆ ನಡೆಯುತ್ತಲೇ ಇರುವುದು ನಿಂತಿಲ್ಲ. ಹಾಲಿವುಡ್ ಮಾತ್ರವಲ್ಲ ಮನೆ, ಶಾಲೆ, ಕಾಲೇಜು, ಕಚೇರಿ, ರಸ್ತೆ, ಎಲ್ಲೆಡೆ ಈ ಪಿಡುಗು ಇದೆ.

ಭಾರತದಲ್ಲಿ 2018ರಲ್ಲಿ ಶುರುವಾದ #ಮೀ ಟೂ ಆಂದೋಲನವು ವಿವಿಧ ದುಡಿಯುವ ಕ್ಷೇತ್ರಗಳಲ್ಲಿನ ಲೈಂಗಿಕ ಕಿರುಕುಳಗಳ ಕಥಾನಕಗಳನ್ನು ಮುಖ್ಯವಾಹಿನಿಯ ಸಂಕಥನಕ್ಕೆ ಸೇರ್ಪಡೆ ಮಾಡುವಲ್ಲಿ ಯಶಸ್ವಿಯಾಯಿತು. ಆದರೆ ಈ ಆಂದೋಲನವು ಒಂದು ಕ್ಷಣಿಕ ಮಿಂಚಿನಂತೆ ಮಿಂಚಿ ಮರೆಯಾಯಿತೇ? ಏಕೆಂದರೆ, ಈವರೆಗೆ ಯಾರಿಗೂ ಶಿಕ್ಷೆಯಾಗಲಿಲ್ಲ. ಕೆಲವೇ ಪ್ರಕರಣಗಳು ನ್ಯಾಯಾಲಯ ತಲುಪಿದರೂ ಸಾಕ್ಷ್ಯಗಳ ಕೊರತೆಯಿಂದ ವಜಾಗೊಂಡವು. ಆರೋಪಿಗಳು ಇನ್ನೂ ಹೆಚ್ಚು ಬಲಿಷ್ಠರಾಗಿ ತಂತಮ್ಮ ದುಡಿಯುವ ಕ್ಷೇತ್ರಗಳಿಗೆ ಹಿಂದಿರುಗಿದರು. ಆದರೆ ಆರೋಪ ಮಾಡಿದ ಅನೇಕ ಮಹಿಳೆಯರು ಅವಕಾಶಗಳನ್ನು ಕಳೆದುಕೊಳ್ಳುವಂತಹ ಸ್ಥಿತಿಯನ್ನು ಎದುರಿಸಬೇಕಾಯಿತು.

ಹಾಗೆಯೇ, 2002ರ ಗುಜರಾತ್ ಗಲಭೆಗಳ ಸಂದರ್ಭದಲ್ಲಿ ನಡೆದಿದ್ದ ಬಿಲ್ಕಿಸ್ ಬಾನುವಿನ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಮಂದಿ ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ನಡೆಯನ್ನು ರದ್ದುಪಡಿಸಿ ಮತ್ತೆ ಅತ್ಯಾಚಾರಿಗಳನ್ನು ಜೈಲಿಗೆ ವಾಪಸ್ ಕಳಿಸಲು ಸುಪ್ರೀಂ ಕೋರ್ಟ್ ಆದೇಶ ಬರಬೇಕಾಯಿತು.

## ಹೆಸರಿಗಷ್ಟೇ ಮಾತೃಶ್ರೀ

ನಮ್ಮ ದೇಶವನ್ನು ನಾವು 'ತಾಯ್ನಾಡು' ಎಂದು ಕರೆಯುತ್ತೇವೆ. 'ಭಾರತ ಮಾತೆಗೆ ಜಯವಾಗಲಿ' ಎಂದು ಜೈಕಾರ ಹಾಕುತ್ತೇವೆ. ಜರ್ಮನ್, ಡಚ್, ಸ್ಕಾಂಡಿನೇವಿಯನ್, ಸ್ಲಾವಿಕ್ ಹಾಗೂ ಬಾಲ್ಟಿಕ್ ರಾಷ್ಟ್ರಗಳಲ್ಲಿನ ಪರಿಕಲ್ಪನೆಗಳಲ್ಲಿರುವ 'ಪಿತೃ ಭೂಮಿ' (ಫಾದರ್ ಲ್ಯಾಂಡ್) ಪರಿಕಲ್ಪನೆಗಳಿಗಿಂತ ಇದು ಭಿನ್ನವಾದದ್ದು. ದಸರಾ ಅಥವಾ ನವರಾತ್ರಿಯಲ್ಲಿ ಶಕ್ತಿ ದೇವತೆಗಳನ್ನು ಪೂಜಿಸುತ್ತೇವೆ. ಸೀತಾರಾಮ, ರಾಧಾಕೃಷ್ಣ ಎಂದು ಆರಾಧಿಸುತ್ತೇವೆ. ಸೀತಾ ಹಾಗೂ ರಾಧಾ ಹೆಸರುಗಳು ರಾಮ, ಕೃಷ್ಣರಿಗಿಂತಲೂ ಮೊದಲು ಬರುತ್ತದೆ. ನಾವು 'ಮಾತೃಶಕ್ತಿ'ಯನ್ನು ಗೌರವಿಸುತ್ತೇವೆ ಎಂದು ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸುತ್ತಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಹ ಹೇಳಿದ್ದಾರೆ.

ಆದರೆ ಅತ್ಯಾಚಾರವೆಂಬುದು ಭಾರತದಲ್ಲಿ ನಾಲ್ಕನೇ ಅತಿ ಸಾಮಾನ್ಯವಾದ ಅಪರಾಧವಾಗಿದೆ ಎಂಬುದನ್ನೂ ನಾವು ಗಂಭೀರವಾಗಿ ಪರಿಗಣಿಸಬೇಕಿದೆ. 2018ರಲ್ಲಿ 33,356 ರೇಪ್ ಪ್ರಕರಣಗಳು ಭಾರತದಾದ್ಯಂತ ವರದಿಯಾಗಿವೆ.




**ಏರುತ್ತಿರುವ ಅಪರಾಧ ಪ್ರಕರಣಗಳು**

- 2020 ಹಾಗೂ 2021ಕ್ಕೆ ಹೋಲಿಸಿದರೆ 2022ರಲ್ಲಿ ಮಹಿಳೆ ಮೇಲಿನ ಅಪರಾಧಗಳ ಪ್ರಮಾಣ ತೀವ್ರ ಏರಿಕೆ ಕಂಡಿದೆ. ದಿಗ್ಭ್ರಮೆಗೊಳಿಸುವ 4,45,256 ಪ್ರಕರಣಗಳು ದಾಖಲಾಗಿವೆ. ಎಂದರೆ, ಪ್ರತಿ ಗಂಟೆಗೆ 51 ಎಫ್‌ಐಆರ್‌ಗಳು ದಾಖಲಾಗುತ್ತಿವೆ ಹಾಗೂ ಭಾರತದಲ್ಲಿ ಪ್ರತಿ ದಿನ ಸರಾಸರಿ 88 ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ!
- 2024ರಲ್ಲಿ, ಜಾರ್ಖಂಡ್‌ನಲ್ಲಿ 7 ಪುರುಷರಿಂದ ಸ್ಪ್ಯಾನಿಷ್ ಪ್ರವಾಸಿ ಮಹಿಳೆ ಮೇಲಾದ ಸಾಮೂಹಿಕ ಅತ್ಯಾಚಾರ ಪ್ರಕರಣವು ಎಷ್ಟು ಆಘಾತಕಾರಿಯೋ ಅಷ್ಟೇ ಆಘಾತಕಾರಿಯಾದದ್ದು ಭಾರತದಲ್ಲಿ ಮಹಿಳಾ ಪ್ರವಾಸಿಗಳ ಕಿರುಕುಳ ಪ್ರಕರಣಗಳನ್ನು ವಿವರಿಸಿದ್ದ ಎಕ್ಸ್ (ಟ್ವೀಟ್) ಬರಹವೊಂದಕ್ಕೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮ ಅವರ ಟೀಕಾತ್ಮಕ ಪ್ರತಿಕ್ರಿಯೆ. ವಾಸ್ತವ ಘಟನೆಗಳಿಗಿಂತ ಭಾರತದ ಗೌರವಕ್ಕೆ ಚ್ಯುತಿ ತರುವ ಟ್ವೀಟ್‌ಗಳ ಬಗ್ಗೆಯೇ ಅವರ ಕಾಳಜಿ ಹೆಚ್ಚಿನದಾಗಿತ್ತು ಎಂಬುದು ವಿಪರ್ಯಾಸ.